**ಕರ್ನಾಟಕ ಸರ್ಕಾರ**

ಸಂಖ್ಯೆ: ಪಪೂಶಿಇ/ಇ-ಆಡಳಿತ/ಆಪೋ/2018-19

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560012.
ದಿನಾಂಕ: 10 -05-2019

**ಸುತ್ತೋಲೆ**

**ವಿಷಯ:** 2018-19 ಸಾಲಿನ ಪ್ರಥಮ ಪಿ.ಯು.ಸಿ ವಿದ್ಯಾರ್ಥಿಗಳ ಫಲಿತಾಂಶದ ಮಾಹಿತಿಗಳನ್ನು ಆನ್‌ಲೈನ್ ಮೂಲಕ ಎಸ್‌ಎಟಿಎಸ್ ಪೋರ್ಟ್‌ಲ್‌ನಲ್ಲಿ ದಾಖಲಿಸಲು ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2018-19ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ, ಅನುದಾನಿತ, ಖಾಸಗಿ ಅನುದಾನರಹಿತ, ವಿಭಜಿತ ಹಾಗೂ ಬಿಬಿಎಂಪಿ ಪದವಿ ಪೂರ್ವ ಕಾಲೇಜುಗಳ ಎಲ್ಲಾ ಪ್ರಥಮ ಪಿ.ಯು.ಸಿ ವಿದ್ಯಾರ್ಥಿಗಳ ಫಲಿತಾಂಶದ ವಿವರಗಳ ಮಾಹಿತಿಯನ್ನು ಆನ್‌ಲೈನ್ ಮೂಲಕ ಎಸ್‌ಎಟಿಎಸ್ ಪೋರ್ಟ್‌ಲ್‌ನಲ್ಲಿ ದಿನಾಂಕ: 10/05/2019 ರೊಳಗಾಗಿ ದಾಖಲಿಸಲು ಸೂಚಿಸಲಾಗಿತ್ತು. ಎಸ್‌ಎಟಿಎಸ್ ಪೋರ್ಟ್‌ಲ್‌ನಲ್ಲಿ ಹೆಚ್ಚಿನ ಕಾಲೇಜಿನವರು ಫಲಿತಾಂಶವನ್ನು ದಾಖಲಿಸಿದ್ದು ಕೆಲವು ಕಾಲೇಜಿನವರು ದಾಖಲಿಸಿರುವುದಿಲ್ಲ.

ಈ ಸಂಬಂಧ ಸದರಿ ಫಲಿತಾಂಶವನ್ನು ಎಸ್‌ಎಟಿಎಸ್ ಪೋರ್ಟ್‌ಲ್‌ನಲ್ಲಿ ನಮೂದಿಸಲು ದಿನಾಂಕ: 31-05-2019 ರವರೆಗೆ ವಿಸ್ತರಿಸಲಾಗಿದೆ.

ಸಲ್ಲಿಸಿದ ಮಾಹಿತಿಯ ಪೂರ್ಣತೆ ಹಾಗೂ ನಿಖರತೆಗೆ ಪ್ರಾಂಶುಪಾಲರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ ಹಾಗೂ ದಿನಾಂಕ: 31-05-2019ರ ನಂತರ ಯಾವುದೇ ಫಲಿತಾಂಶವನ್ನು ದಾಖಲಿಸಲು ಅವಕಾಶವಿರುವುದಿಲ್ಲ.

10/5/19

ಜಂಟಿ ನಿರ್ದೇಶಕರು(ಆಡಳಿತ),
ಪದವಿ ಪೂರ್ವ ಶಿಕ್ಷಣ ಇಲಾಖೆ.

ಗೆ,

1. ರಾಜ್ಯ ಯೋಜನಾ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು- ಎಸ್‌ಎಟಿಎಸ್ ಪೋರ್ಟ್‌ಲ್‌ನಲ್ಲಿ ಅಗತ್ಯ ಮಾಹಿತಿ ಅಳವಡಿಸಲು ಕೋರಿದೆ.
2. ಪದವಿ ಪೂರ್ವ ಕಾಲೇಜುಗಳ ಎಲ್ಲಾ ಪ್ರಾಂಶುಪಾಲರಿಗೆ ಅಗತ್ಯ ಕ್ರಮಕ್ಕಾಗಿ.

ಪ್ರತಿ.

1. ಇ-ಆಡಳಿತ ಶಾಖೆ, ಇಲಾಖಾ ಅಂತರ್‌ಜಾಲದಲ್ಲಿ ಅಳವಡಿಸಲು.
2. ಕಛೇರಿ ಪ್ರತಿ.